ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಬೇಲೂರು.

ಸಿಸಿಃ 1014/2016

| | | |
|---|---|---|
| ಹೆಸರು | ಶಾಂತಕುಮಾರ | ದಿಃ 24.01.2020 |
| ತಂದೆಯ ಹೆಸರು | ಮರಿಯಪ್ಪ | |
| ವಯಸ್ಸು | 48 ವರ್ಷ | ಪಿಡಬ್ಲ್ಯೂಃ 1 |
| ಉದ್ಯೋಗ | ನಾರಾಯಣಪುರ ಗ್ರಾಮ ಪಂಚಾಯಿತಿ , ಪಿ.ಡಿ.ಓ. | ಸಿಡಬ್ಲ್ಯೂಃ1 |
| ವಾಸ | ಬೇಲೂರು | ವಿಧಿ ಬದ್ಧವಾಗಿ ಪ್ರಮಾಣೀಕರಿಸಲಾಯ್ತು |

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ

ನಾನು ದಿಃ28.06.2010 ರಿಂದ 28.07.2019 ರವರೆಗೆ ಅನುಘಟ್ಟ ಗ್ರಾಮ ಪಂಚಾಯ್ತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡಿದ್ದೇನೆ.

ನಾನು ಅನುಘಟ್ಟ ಗ್ರಾಮದ ಸ.ನಂ.61/1 ರಲ್ಲಿ ಸರ್ಕಾರಿ ಬೋರ್ವೆಲ್ ಇದ್ದು , ಪಂಚಾಯಿತಿ ವತಿಯಿಂದ ವಿವಿಧ ಗ್ರಾಮಗಳಿಗೆ ಸುಮಾರು 20 ವರ್ಷಗಳಿಂದ ನೀರು ಸರಬರಾಜು ಮಾಡುತ್ತಿದ್ದೆವು. ಬೋರ್ವೆಲ್ ಸುಸ್ಥಿತಿಯಲ್ಲಿತ್ತು. ಈ ಪ್ರಕರಣ ದಾಖಲು ಆಗುವ 6 ತಿಂಗಳ ಹಿಂದೆ ಎ.ಎನ್. ನಾಗರಾಜು ರವರು ಸರ್ಕಾರಿ ಬೋರ್ವೆಲ್ ನಮ್ಮ ಜಾಗದಲ್ಲಿ ಇರುತ್ತದೆ ಎಂದು ನೀರು ಸರಬರಾಜು ಮಾಡಲು ತೊಂದರೆ ಉಂಟು ಮಾಡಿರುತ್ತಾರೆ. ನಾವು ಅಳವಡಿಸಿದ್ದ ಮೋಟಾರ್ 6 ತಿಂಗಳ ಹಿಂದೆ ರಿಪೇರಿಗೆ ಬಂದಿತ್ತು. ದಿಃ31.01.2016 ರಂದು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಆಗ ಪೊಲೀಸರು ನಾಗರಾಜು ರವರನ್ನು ಕರೆಯಿಸಿ ಬುದ್ಧಿ ಹೇಳಿ ವಾಪಸ್ಸುಕಳುಹಿಸಿರುತ್ತಾರೆ. ನಂತರ ಪಂಚಾಯಿತಿ ಮೋಟಾರ್ ಕೆಟ್ಟು ಹೋಗಿದ್ದು , ರಿಪೇರಿ ಮಾಡಿಸಲು ಮೋಟಾರ್ ಎತ್ತಿಸಿದಾಗ ನಾಗರಾಜು , ನಾಗರತ್ನಮ್ಮ , ಕಿರಣ್ ಮತ್ತು ನೂತನ್ ರವರು ಬೋರ್ವೆಲ್ ಗೆ ಕಲ್ಲುಗಳನ್ನು ಹಾಕಿರುತ್ತಾರೆ ಎಂದು ಪಂಚಾಯಿತಿ ವಾಟರ್ ಮೆನ್ ಚನ್ನಯ್ಯ ಹಾಗೂ ಚಾಸಾ-5 ರವರು ಮೊಬೈಲ್ ನಲ್ಲಿ ವಿಡಿಯೋ ಚಿತ್ರಿಕರಣ ಮಾಡಿ ನಮಗೆ ಕೊಟ್ಟಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಸಮಯ ನೀಡಲಾಯ್ತು.

ಓ ಹೇ ಕೇ ಸ ಇ ಒ

ಜೆಎಂಎಫ್‌ಸಿ-ಬೇಲೂರು

**Case Called.**

**Accused are present.**

**CW-1 present and partly chief examined PW-1.**

**For further chief of PW.1 by 27.02.2020.**

**Civil Judge: Belur**